ವೆಂಕಟೇಶ್ ದಾವಣಗೆರೆ ಕೆಪಿಟಿಸಿಎಲ್‌ನಲ್ಲಿ ನೌಕರಿಯಲ್ಲಿದ್ದಾನೆ. ಎರಡರ ಜವಾಬ್ದಾರಿ ನಿಭಾಯಿಸಿದ ಸಂತೃಪ್ತಿಯಿದೆ.

◆ **ಹಳ್ಳಿಗಾಡಿನಲ್ಲಿ ನಟಿಸುವ ನಟಿಯಾಗಿ ವೃತ್ತಿ ನಾಟಕಗಳಲ್ಲಿ ಕೆಲಕಾಲ ಪಾತ್ರ ವಹಿಸಿದ ನೀವು ಹವ್ಯಾಸಿ ರಂಗಭೂಮಿಯಲ್ಲೂ ತೊಡಗಿಕೊಂಡಿದ್ದೀರಿ..ವೃತ್ತಿ ರಂಗಭೂಮಿಗೂ, ಹವ್ಯಾಸಿಗೂ, ಗ್ರಾಮೀಣ ವೃತ್ತಿ ರಂಗಭೂಮಿಗೂ ನಟಿಯಾಗಿ ಏನು ವ್ಯತ್ಯಾಸ ಕಂಡಿರಿ.**

ಎಂಬತ್ತರ ದಶಕದಲ್ಲೇ ಚಿಗಟೇರಿಯಲ್ಲಿ ಮುದೇನೂರು ಸಂಗಣ್ಣನವರು ಸಂಘಟಿಸಿದ ಹವ್ಯಾಸಿ ರಂಗಶಿಬಿರ, 1994ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ, ದೆಹಲಿಯ ರಾಷ್ಟ್ರೀಯ ನಾಟಕ ಶಾಲೆ ಆಶ್ರಯದಲ್ಲಿ ನಡೆದ ಶಿಬಿರದಲ್ಲಿ, ಹಡಗಲಿ ಎಂ.ಪಿ. ಪ್ರಕಾಶ್ ಅವರ ರಂಗಭಾರತಿ ಶಿಬಿರದಲ್ಲಿ ಸಾಣೇಹಳ್ಳಿ ರಂಗಶಿಬಿರದ ವಿದ್ಯಾರ್ಥಿಯಾಗಿ, ಉಪನ್ಯಾಸಕಿಯಾಗಿ ಸಾಕಷ್ಟು ಅನುಭವ ಪಡೆದೆ. ರಾಘವೇಂದ್ರ ಜೋಶಿ ನಿರ್ದೇಶನದ 'ಲಕ್ಷ್ಮಣರೇಖೆ', 'ರಂಗಾಂತರಂಗ ವಿಲಾಸ', 'ಸೂರ್ಯ ಶಿಕಾರಿ' ಮುಂತಾದ ಪ್ರಮುಖ ಹವ್ಯಾಸಿ ನಾಟಕಗಳಲ್ಲಿ ಮುಖ್ಯ ಪಾತ್ರಗಳೇ ದೊರೆತವು. ಇವಕ್ಕೆ ಸಾಕಷ್ಟು ಮನ್ನಣೆ ಪ್ರಶಸ್ತಿಗಳೂ ಲಭಿಸಿದವು. ಸಂಗಣ್ಣನವರ 'ಶೀಲಾವತಿ' ನಾಟಕದ ಶೀಲಾವತಿ ಪಾತ್ರ ನನಗೆ ಜನಪ್ರಿಯತೆ ತಂದುಕೊಟ್ಟಿತು. ರಾಜ್ಯದ ಹಲವೆಡೆ 77 ಪ್ರದರ್ಶನ ಕಂಡ ಈ ನಾಟಕ ಕೇರಳದ ಅಖಿಲ ಭಾರತ ನಾಟಕ ಉತ್ಸವದಲ್ಲಿ ಗುಡಿಹಳ್ಳಿಯವರ ನೇತೃತ್ವದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ಭಾರೀ ಮನ್ನಣೆ ಗಳಿಸಿತು. ಕೇಂದ್ರ ಸರ್ಕಾರದ ಸಂಗೀತ ಮತ್ತು ನಾಟಕ ವಿಭಾಗದ ಮುಖ್ಯಸ್ಥರಾಗಿದ್ದ ಹೂಗೊಪ್ಪಲು ಕೃಷ್ಣಮೂರ್ತಿ ಅವರು

